ಓ.ಎಸ್. ನಂ. 20/2020

ಪಿ.ಡಬ್ಲ್ಯು: 01(ಬಸಮ್ಮ)

ದಿನಾಂಕಃ 16.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ AVK ವಕೀಲರಿಂದ.

ದಾವೆಯನ್ನು ಭಾಗ ಕೋರಿ ಸಲ್ಲಿಸಿರುತ್ತೇನೆ. ನನ್ನ ತಂದೆಯ ಹೆಸರು ಯಲ್ಲಪ್ಪ. ನನ್ನ ತಾತನ ಹೆಸರು ತಿಮ್ಮಪ್ಪ. ತಿಮ್ಮಪ್ಪನಿಗೆ 5 ಜನ ಮಕ್ಕಳು. ಅವರುಗಳು ಯಲ್ಲಪ್ಪ, ಬಸಪ್ಪ, ಸಣ್ಣಯಲ್ಲಪ್ಪ, ಸಣ್ಣತಿಮ್ಮಪ್ಪ, ಸುಂಕಮ್ಮ ಇರುತ್ತಾರೆ. ತಾತನಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ತಾತನ ಅಣ್ಣತಮ್ಮಂದಿರು ಪಾಲು ವಿಭಾಗ ಆಗಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್‌ಬಂದಿ ಹಾಗೂ ಸರ್ವೆ ನಂಬರ್ ನನಗೆ ನೆನಪಿಲ್ಲ. ಅದು ನಮ್ಮ ತಂದೆಯ ಹೆಸರಿನಲ್ಲಿದೆ. ತಂದೆ ಮೃತಪಟ್ಟು ಬಹಳ ವರ್ಷ ಆಗಿರುತ್ತದೆ.

4 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ. ಜಂಟಿ ಕುಟುಂಬದಲ್ಲಿ ಇನ್ನು ಇದ್ದೇವೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. 4 ನೇ ಪ್ರತಿವಾದಿಗೆ ಮಕ್ಕಳು ಇರುವುದಿಲ್ಲ. 4 ನೇ ಪ್ರತಿವಾದಿಗೆ ಪಲ್ಲವಿ ಎಂಬ ಮಗಳಿದ್ದಾಳೆ ಎಂದರೆ ಆಗ ಇರಲಿಲ್ಲ, ಈಗ ಇದ್ದಾಳೆ. 3 ನೇ ಪ್ರತಿವಾದಿಗೆ 4 ನೇ ಪ್ರತಿವಾದಿ ಹಾಗೂ ಅಂಜಿನಮ್ಮ ಎಂಬ ಇಬ್ಬರು ಪತ್ನಿಯರು ಇರುತ್ತಾರೆ. 4 ನೇ ಪ್ರತಿವಾದಿ ಮೊದಲನೇಯ ಪತ್ನಿ. 2 ನೇ ಹೆಂಡತಿಯಾದ ಅಂಜಿನಮ್ಮಳಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ.

3 ನೇ ಪ್ರತಿವಾದಿ 4 ನೇ ಪ್ರತಿವಾದಿಯನ್ನು ಮನೆಯಿಂದ ಹೊರಹಾಕಿದ ಕಾರಣ 4 ನೇ ಪ್ರತಿವಾದಿ ಹಾಗೂ ಆಕೆಯ ಮಗಳು ಪಲ್ಲವಿ ಭಾಗ ಕೋರಿ ನನ್ನ ತಂದೆಯ ವಿರುದ್ಧ ಹಾಗೂ 3 ನೇ ಪ್ರತಿವಾದಿಯ ವಿರುದ್ಧ ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ದಾವೆ ಹೂಡಿದ ಬಗ್ಗೆ ಮಾತ್ರ ಗೊತ್ತು. ಸರ್ವೆ ನಂಬರ್ 23 ಬಿ/1, ಮನೆ ಸಂಖ್ಯೆ 174 ರ ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದರು ಎಂದು ಅದು ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ 3 ನೇ ಪ್ರತಿವಾದಿ ಅದರಲ್ಲಿ ರಾಜಿ ಮಾಡಿಕೊಂಡು ಅದರಲ್ಲಿ ಅಂತಿಮ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 23 ಬಿ/1, ಮನೆ ಸಂಖ್ಯೆ 174 ರ ಆಸ್ತಿಯನ್ನು ರಾಜಿ ಮಾಡಿಕೊಂಡಾಗ 4 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಅದು ಯಾವುದು ನನಗೆ ಗೊತ್ತಿಲ್ಲ. ಅದಾದ ನಂತರ ಪಹಣಿ ಪತ್ರಿಕೆಗಳು 4 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ದಾವೆಯಲ್ಲಿ ಸದರಿ ರಾಜಿ ಮಾಡಿಕೊಂಡಿರುವುದನ್ನು ರದ್ದು ಮಾಡಲು ಕೋರಿಕೊಂಡಿರುವುದಿಲ್ಲ.

ಓ.ಎಸ್. ನಂ. 20/2020

ಪಿ.ಡಬ್ಲ್ಯೂ: 01(ಬಸಮ್ಮ)

ದಾವಾ ಸ್ವತ್ತನ್ನು ಹೊರತುಪಡಿಸಿ ಸರ್ವೆ ನಂಬರ್ 91ಬಿ - 5 ಎಕರೆ, 91ಎ – 2.61 ಎಕರೆ, 21ಇ – 3.15 ಎಕರೆ ಮತ್ತು ಮನೆ ಸಂಖ್ಯೆ 174 ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಅದರಲ್ಲಿ ನನ್ನ ತಂದೆಗೂ ಹಕ್ಕು ಇದೆ ಎಂದರೆ ಹೌದು. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಹೌದು. 3 ಹಾಗೂ 4 ನೇ ಪ್ರತಿವಾದಿಯವರ ಮಗಳ ಪಲ್ಲವಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಹೌದು. ವಾದಿ ಪರ ವಕೀಲರು 3 ನೇ ಪ್ರತಿವಾದಿ ಜೀವಂತ ಇದ್ದಾಗ ಅವರ ಮಗಳನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿ ಪರ ವಕೀಲರು ಆ ಬಗ್ಗೆ ತಮ್ಮ ವಾದ ಮಂಡಿಸುವುದಾಗಿ ನುಡಿದಿರುತ್ತಾರೆ.

ಸರ್ವೆ ನಂಬರ್ 23ಬಿ - 5 ಎಕರೆ ನನ್ನ ತಾತನ ಹೆಸರಿನಲ್ಲಿದೆ ಎಂದರೆ ಹೌದು. ಅದನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸೇರಿಸಿರುತ್ತೇವೆ. ನಾನು ಅದನ್ನು ಸೇರಿಸದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಬಂದಿರುವ ಆಸ್ತಿಯನ್ನು ಹಿಂಪಡೆಯುವ ಸಲುವಾಗಿ ನಾವು ಇತರ ಪ್ರತಿವಾದಿಗಳೊಂದಿಗೆ ಸೇರಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಈಗಾಗಲೇ ದಾವಾ ಸ್ವತ್ತು ಭಾಗದಲ್ಲಿ ನೀಡಿರುವ ಕಾರಣ ಅದರಲ್ಲಿ ನಮಗೆ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಇರದೇ ಇದ್ದರು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ನೆನಪಿಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.